Date : 29-10-2015

# ಸರಕಾರಿ ಏಜೆನ್ಸಿಗಳ ಮೂಲಕ ಬಫ಼ರ್ ದಾಸ್ತಾನು ಹೊಂದಲು 1 ಲಕ್ಷ ಟನ್ ಬೇಳೆಕಾಳು ಖರೀದಿ

ಎಫ್‌ಸಿಐ, ಎಸ್‌ಎಫ್‌ಎಸಿ, ನಾಫೆಡ್‌ನಂತಹ ಸರಕಾರಿ ಏಜೆನ್ಸಿಗಳ ಮೂಲಕ, ಬೆಲೆಯೆರಿಕೆಗೆ ಕಡಿವಾಣ ಹಾಕಲು, ನವೆಂಬರ್ 1, 2015 ರಿಂದ 1 ಲಕ್ಷ ಟನ್ ಬೇಳೆಕಾಳು ಖರೀದಿ ಮಾಡಿ ಸಂಗ್ರಹಿಸಲು ಮತ್ತು ದರ ಹೆಚ್ಚಳವಾದಾಗ ಮಾರುಕಟ್ಟೆಗೆ ಬಿಡುಗಡೆಗೊಳಿಸಿ ದರ ನಿಯಂತ್ರಣ ಮಾಡಲು ಸರಕಾರ ಯೋಜಿಸುತ್ತೆದೆಯೆನ್ನಲಾಗಿದೆ. ಖರೀದಿಯಲ್ಲಿ ಮುಖ್ಯವಾಗಿ ತೊಗರಿ, ಉದ್ದು ಮತ್ತು ಕಡ್ಲೆ ಒಳಗೊಳ್ಳಲಿದೆಯೆನ್ನಲಾಗಿದೆ. ಮೂಲಗಳ ಪ್ರಕಾರ, ಎಫ್‌ಸಿಐ 50000 ಟನ್, ಎಸ್‌ಎಫ್‌ಎಸಿ 40000 ಟನ್, ನಾಫೆಡ್ 10000ಟನ್ ಬೇಳೆಕಾಳುಗಳನ್ನು ರೈತರಿಂದ ಖರೀದಿಸಿ ಸಂಗ್ರಹಿಸಲಿವೆಯೆನ್ನಲಾಗಿದ್ದು, ಇದಕ್ಕಾಗಿ ನಾಫೆಡ್‌ಗೆ ಬೆಲೆ ಸ್ಥಿರೀಕರಣ ವಿಧಿಯಿಂದ ರೂ 300 ಕೋಟಿ, ಎಫ್‌ಸಿಐ ಮತ್ತು ಎಸ್‌ಎಫ್‌ಎಸಿಗಳಿಗೆ ಅರ್ಥ ಸಚಿವಾಲಯದಿಂದ ಸಹಾಯ ಒದಗಿಸಲಾಗುವುದೆನ್ನಲಾಗಿದೆ. ಈ ಮೊದಲು ಸರಕಾರದ ಧಾನ್ಯ ಖರೀದಿ ಅಂಗವಾದ ಎಫ್‌ಸಿಐ, ಅಕ್ಕಿ ಮತ್ತು ಗೋಧಿ ಮಾತ್ರ ಖರೀದಿಸಿ ಸಂಗ್ರಹಿಸುತ್ತಿತ್ತು. ಬೇಳೆಕಾಳು ದರಗಳು ಬೆಂಬಲ ಬೆಲೆಗಿಂತ ಕಡಿಮೆಯಾದಾಗ ಕೃಷಿ ಸಚಿವಾಲಯ ಸೀಮಿತ ಖರೀದಿಗೆ ಸೂಚಿಸಬಹುದೆನ್ನಲಾಗಿದೆ. ಅರ್ಥ ಸಚಿವಾಲಯದಿಂದ ಸಬ್ಸಿಡಿಯೂ ಸೇರಿದಂತೆ ಆಹಾರ ಸಬ್ಸಿಡಿ ಬಜೆಟ್‌ಗಿಂತ ಹೆಚ್ಚಿನ ಮೀಸಲು ಆರ್ಥಿಕ ಸಹಾಯ ಲಭ್ಯವಾದಾಗ ಬೇಳೆಕಾಳು ಖರೀದಿಸಲು ತೊಡಗಬಹುದೆಂದು ಎಫ್‌ಸಿಐಯ ಅಧಿಕಾರಿ ಹೇಳಿದ್ದಾರೆನ್ನಲಾಗಿದೆ. ಅರ್ಥ ಸಚಿವಾಲಯದಿಂದ ಸಬ್ಸಿಡಿ ರೂಪದಲ್ಲಿ ರೂ 50000ಕೋಟಿಗಿಂತಲೂ ಹೆಚ್ಚಳ ಹಣ ಎಫ್‌ಸಿಐಗೆ ಪಾವತಿಸಲು ಬಾಕಿಯಿರುವುದರಿಂದ ಸರಕಾರದಿಂದ ಸೂಕ್ತ ಅರ್ಥಿಕ ಭದ್ರತೆಯಿಲ್ಲದೆ ಎಫ್‌ಸಿಐ ಬೇಳೆಕಾಳು ಖರೀದಿಸಲು ಬಯಸುತ್ತಿಲ್ಲವೆಂದು ಅಧಿಕಾರಿ ಹೇಳಿದ್ದಾರೆನ್ನಲಾಗಿದೆ. ಈ ಮೊದಲು ಉನ್ನತ ಮಟ್ಟದ ಕಮಿಟಿ ಗೋಧಿ, ಅಕ್ಕಿ ಸೇರಿದಂತೆ 23 ವಸ್ತುಗಳ ಕನಿಷ್ಠ ಬೆಂಬಲ ಬೆಲೆಯನ್ನು ಪುನರವಲೋಕಿಸಲು ಸೂಚಿಸಿದೆಯೆನ್ನಲಾಗಿದೆ. ಕನಿಷ್ಠ ಬೆಂಬಲ ಬೆಲೆಯ ಪರಿಣಾಮಕಾರಿ ಕ್ರಿಯಾತ್ಮಕ ಬೆಂಬಲ ನೀಡಲು ಸಹಕಾರಿಯಾಗುವಂತಾಗಬೇಕೆಂದೂ ಗೋಧಿ, ಅಕ್ಕಿ ಬೇಳೆಕಾಳು, ಖಾದ್ಯತೈಲಬೀಜಗಳಿಗೆ ಆದ್ಯತೆ ನೀಡಿ ಬೆಂಬಲ ಬೆಲೆಯನ್ನು ಪುನರವಲೋಕಿಸುವಂತೆ ಕಮಿಟಿ ಸಲಹೆ ನೀಡಿದೆಯೆನ್ನಲಾಗಿದೆ.